ಅಜ್ಜಿಯನ್ನು ತಬ್ಬಿಕೊಳ್ಳುತ್ತಾ 'ಅಜ್ಜಿ ಅಜ್ಜಿ.. ಪತ್ರೊಡೆ ಮಾಡ್ಕೊಂಡು ಬಂದಿದ್ದೀಯಾ? ಮಂಗಳೂರು ಬನ್? ಹಲಸಿನಹಣ್ಣಿನ ಗುಳುಂಬಿ?' ಅಜ್ಜಿ ಸಂಜಯ್‌ನ ಹಣೆಗೆ ಮುತ್ತಿಟ್ಟು 'ಮಾಡ್ಕೊಳ್ದೆ ಬರ್ತೀನಾ ಕಂದಾ? ಎಲ್ಲಾ ತಂದಿದ್ದೀನಿ' ಎಂದರು. ಸ್ವಾತಿ ಅಜ್ಜಿಯ ಕಾಲಿಗೆ ನಮಸ್ಕರಿಸಿ 'ನಿಮ್ಮ ಟ್ರಂಕ್ ಕೊಡಿ ಅಜ್ಜಿ, ಕೋಣೆಯೊಳಗೆ ಇಡ್ತೀನಿ' ಎನ್ನುತ್ತಾ ಅಜ್ಜಿಯ ಟ್ರಂಕ್‌ಗೆ ಕೈಹಾಕಿದಳು.

'ಅರೆರೇ ಸ್ವಾತಿ ಪುಟ್ಟಾ! ಅದೆಷ್ಟು ಉದ್ದ ಆಗಿದ್ದೀಯೆ! ನೋಡಿ ತುಂಬಾ ದಿನವಾಯ್ತಲ್ಲಾ... ಅದಕ್ಕೆ ನನಗೆ ಚೆನ್ನಾಗಿ ವ್ಯತ್ಯಾಸ ಗೊತ್ತಾಗುತ್ತದೆ' ಎಂದರು ಅವಳ ತಲೆ ನೇವರಿಸಿ. ಮಗನ ಕಡೆ ತಿರುಗಿ 'ವಿಜಯ್! ನೀನಂತೂ ಮಂಗಳೂರಿಗೆ ಬರೋದೇ ಬಿಟ್ಬಿಟ್ಟೆ. ಯಾವಾಗ ನೋಡು ಕೆಲಸ ಕೆಲಸಾಂತ ನೀನು, ವಿಭಾ ಮೈಸೂರು ಬಿಡೋದೇ ಇಲ್ಲ. ಮಕ್ಕಳಿಗೆ ರಜಾ ಬಂದಾಗಲಾದರೂ ಬರ್ಬಾರ್ದಾ? ಅವರಿಗೂ ಒಂದು ಬದಲಾವಣೆ ಬೇಕಲ್ವಾ?' ಎಂದರು.

'ಅಮ್ಮಾ! ಈಗೆಲ್ಲಾ ಬಿಡುವಿನ ದಿನಗಳಲ್ಲೂ ಅವರಿಬ್ಬರಿಗೂ ಸಾಕಷ್ಟು ಆಟ, ಕೋಚಿಂಗ್, ಸ್ವಿಮ್ಮಿಂಗ್ ಅಂತ ಇತರೆ ಚಟುವಟಿಕೆಗಳು ಇರುತ್ತಮ್ಮಾ, ಬೇಸಿಗೆ ರಜದಲ್ಲಿ ಕೂಡ 'ಕ್ಯಾಂಪ್'ಗೆ ಹೋಗಿಬಿಡುತ್ತಾರೆ. ಮಕ್ಕಳನ್ನು ನೋಡಬೇಕೆನಿಸಿದಾಗ ನೀನೇ ಬಂದುಬಿಡು. ಆಯ್ತಾ?' ತಾಯಿಯ ಹೆಗಲು ಬಳಸಿ ಒಳಗೆ ಕರೆತಂದರು ವಿಜಯ್.

'ಬನ್ನಿ ಅಮ್ಮಾ! ಕೈಕಾಲು ತೊಳೆದು ಪ್ರಯಾಣದ ಆಯಾಸ ಪರಿಹರಿಸಿಕೊಳ್ಳಿ. ಆಮೇಲೆ ತಿಂಡಿ ಬುಟ್ಟಿ ಬಿಚ್ಚೋದು ಮಾಡಿ. ಸಂಜೂ... ಅಜ್ಜೀಗೆ ಸುಧಾರಿಸಿಕೊಳ್ಳೋಕ್ಕೆ ಬಿಡು. ಹಾಗೆ ಕತ್ತಿನ ಮೇಲೆ ಕೂರಬೇಡ ತಿಂಡಿ ತಿಂಡಿ ಅಂತ' ವಿಭಾ ಗದರಿದಳು ಮಗನನ್ನು.

'ಕೇಳಲಿ ಬಿಡು ವಿಭಾ! ತಿಂಡಿ ಆಸೆ ಮಕ್ಕಳಿಗಲ್ದೇ ಇನ್ಯಾರಿಗಿರುತ್ತೆ? ಇರೋ ಸಂಜು, ಕೈಕಾಲು ತೊಳೆದು ಬರುತ್ತೇನೆ' ಎನ್ನುತ್ತಾ ಒಳ ನಡೆದರು ಕಮಲಮ್ಮ.

***

'ಅಮ್ಮಾ... ನೆನ್ನೆ ರಾತ್ರಿ ಪೂರ್ತಿ ನನಗೆ ನಿದ್ರೆ ಬರಲಿಲ್ಲಮ್ಮ... ಆಗಾಗ ರಾತ್ರಿ ಹೊತ್ತು ಬಚ್ಚಲಿಗೆ ಹೋಗಬೇಕಾಗುತ್ತೆ ಅಂತ ಅಜ್ಜಿ ಮಂಚದ ಒಂದು ಬದಿಗೇ ಮಲಗಬೇಕು ಅಂದ್ರು. ಸಂಜೂ ಕೆಳಗೆ ಬಿದ್ದಿಡ್ತಾನೆ ಅಂತ ಅವನನ್ನು ಗೋಡೆ ಕಡೆ ಮಲಗಿಸಿ, ನಾನು ಮಧ್ಯೆ ಮಲಗಬೇಕಾಯ್ತು. ಒಂದು ಕಡೆ ಅಜ್ಜಿಯ ಗೊರಕೆ, ಇನ್ನೊಂದು ಕಡೆ ಈ ಸಂಜೂ ನನ್ಮೇಲೆ ಕಾಲು ಹಾಕೋದು, ಒದೆಯೋದು ಮಾಡ್ತಿದ್ದ. ನನಗೆ ಮಿಸುಕಾಡಲು ಜಾಗ ಇರಲಿಲ್ಲ' ಸ್ವಾತಿ ಅಳುಮೋರೆಯೊಂದಿಗೆ ಹೇಳಿದಳು.

'ಜೋರಾಗಿ ಹೇಳ್ಬೇಡ ಸ್ವಾತಿ. ಅಜ್ಜಿ ಬೇಜಾರು ಮಾಡಿಕೊಳ್ತಾರೆ. ಅವರೇನು ಇಲ್ಲಿ ಸದಾ ಇರ್ತಾರಾ? ಬಂದಾಗ ನಾಲ್ಕು ದಿನ ಅವರೊಂದಿಗೆ ನಗನಗ್ತಾ ಇರು' ವಿಭಾ ಬುದ್ಧಿ ಹೇಳಿದಳು ಮಗಳಿಗೆ.

'ಅಷ್ಟೇ ಅಲ್ಲ ಅಮ್ಮ... ಬೆಳಗ್ಗಿನ ಜಾವ ಐದು ಗಂಟೆಗೆ ನಮ್ಮ ಕೋಣೆಯ ಗೂಡಿನಲ್ಲಿ ಅವರು ಇಟ್ಟುಕೊಂಡಿರುವ ದೇವರ ವಿಗ್ರಹಕ್ಕೂ